ಮಾನವ ಸಂಪನ್ಮೂಲ ವಿಭಾಗ/मानव संसाधन अनुभाग/**HUMAN RESOURCES SECTION**
ಭಾರತೀಯ ವಿಜ್ಞಾನ ಸಂಸ್ಥೆ/भारतीय विज्ञान संस्थान/**INDIAN INSTITUTE OF SCIENCE**
ಬೆಂಗಳೂರು/बेंगलूरु/**BENGALURU – 560012**
ದೂರವಾಣಿ/दूरभाष/**TELEPHONE : 080-2293-2493**
ಇ-ಮೇಲ್/**E-mail**/ईमेल : recruitment.council@iisc.ac.in

## ಜಾಹೀರಾತು ಸಂಖ್ಯೆ.ಆರ್(ಎಚ್ಆರ್)/308-2026/1 ದಿನಾಂಕ 20ನೇ ಫೆಬ್ರವರಿ 2026

ಉನ್ನತ ಶಿಕ್ಷಣ ಮತ್ತು ಸಂಶೋಧನೆಗಾಗಿ ಭಾರತ ಸರ್ಕಾರದಿಂದ ಧನಸಹಾಯ ಪಡೆದಿರುವ ಪ್ರಧಾನ ಕೇಂದ್ರೀಯ ಅನುದಾನಿತ ತಾಂತ್ರಿಕ ಸಂಸ್ಥೆಯಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ರಾಷ್ಟ್ರಕ್ಕೆ ಪ್ರಮುಖ ಕೊಡುಗೆಗಳನ್ನು ನೀಡಿ ಒಂದು ಶತಮಾನವನ್ನು ಪೂರ್ಣಗೊಳಿಸಿದೆ. ಸಂಸ್ಥೆಯು ಹೊಸ ಮೂಲಸೌಕರ್ಯಗಳು (ಕಟ್ಟಡಗಳ ಸ್ಥಾಪನೆ), ಹಲವಾರು ಹೊಸ ಅಂತರಶಿಸ್ತೀಯ ಕಾರ್ಯಕ್ರಮಗಳು ಮತ್ತು ಮೇಧಾವಿ ಅಧ್ಯಾಪಕರುಗಳನ್ನು ಒಳಗೊಂಡು ಮುಂದುವರಿದ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ವಿಶ್ವ ನಾಯಕನಾಗುವ ಉದ್ದೇಶವನ್ನು ಹೊಂದಿದ್ದು ಅದರಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಈ ನಿಟ್ಟಿನಲ್ಲಿ, ಸಂಸ್ಥೆಯು ಈ ಕೆಳಗಿನ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಅಥವಾ ವಿದೇಶಿ ಸೇವೆಯ ಆಧಾರದ ಮೇಲೆ ಸಂಸ್ಥೆಗೆ ಅನ್ವಯವಾಗುವ ಭಾರತ ಸರ್ಕಾರದ ಪ್ರಮಾಣಿತ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ವಿವರಗಳು ಈ ಕೆಳಗಿನಂತಿದೆ:

| ಕ್ರಮ ಸಂಖ್ಯೆ | ಹುದ್ದೆ | **ಕುಲಸಚಿವರು (01-ಕಾಯ್ದಿರಿಸದ)** |
|---|---|---|
| 1 | ವೇತನ ಶ್ರೇಣಿ | ಪಿಬಿ-4: 37400-67000+ಜಿಪಿ 10000 [7ನೇ ಸಿಪಿಸಿಯ 14 ನೇ ವೇತನ ಮಟ್ಟ (ರೂ.1,44,200- ರೂ. 2,18,200)] |
| 2 | ನೇಮಕಾತಿಯ ಅಧಿಕಾರಾವಧಿ | <u>ನಿಯೋಜನೆಯ ಆಧಾರದ ಮೇಲೆ</u><br>ಮಾತೃ ಇಲಾಖೆಯಲ್ಲಿ ಕನಿಷ್ಠ 5 ವರ್ಷಗಳ ಅಧಿಕಾರಾವಧಿ ಅಥವಾ 62 ವರ್ಷಗಳ ನಿವೃತ್ತಿಯ ವಯಸ್ಸನ್ನು ತಲುಪುವವರೆಗೆ.<br><br><u>ಒಪ್ಪಂದದ ಮೇರೆಗೆ</u><br>5 ವರ್ಷಗಳ ಅವಧಿಗೆ ಅಥವಾ 62 ವರ್ಷ ವಯಸ್ಸನ್ನು ತಲುಪುವವರೆಗೆ ಇವುಗಳಲ್ಲಿ ಯಾವುದಾದರು ಅಥವಾ ಈ ನಿಟ್ಟಿನಲ್ಲಿ ಸರ್ಕಾರವು ಕಾಲಕಾಲಕ್ಕೆ ತಕ್ಕಂತೆ ನಿಗದಿಪಡಿಸಿ ಹೊರಡಿಸಿದ ಆದೇಶಗಳಂತೆ. ಒಪ್ಪಂದದ ನೇಮಕಾತಿಯು ಒಂದು ವರ್ಷದ ಪ್ರೊಬೇಶನರಿಯೊಂದಿಗೆ ಇರುತ್ತದೆ. |
| 3 | ಅಗತ್ಯ ವಿದ್ಯಾರ್ಹತೆ | ಕನಿಷ್ಠ 55% ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ. |
| 4 | ಅನುಭವ | ಶೈಕ್ಷಣಿಕ ಆಡಳಿತದಲ್ಲಿ ಸಹ ಪ್ರಾಧ್ಯಾಪಕರಾಗಿ ಅನುಭವ ಸೇರಿದಂತೆ ರೂ. 7000/- ಮತ್ತು ಅದಕ್ಕಿಂತ ಹೆಚ್ಚಿನ AGP ಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕನಿಷ್ಠ 15 ವರ್ಷಗಳ ಅನುಭವ ಅಥವಾ ರೂ. 8000/- ಮತ್ತು ಅದಕ್ಕಿಂತ ಹೆಚ್ಚಿನ AGP ಯಲ್ಲಿ 8 ವರ್ಷಗಳ ಸೇವೆ. |

| | | |
|---|---|---|
| | | ಅಥವಾ<br>ಸಂಶೋಧನಾ ಸಂಸ್ಥೆ ಮತ್ತು/ಅಥವಾ ಇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹೋಲಿಸಬಹುದಾದ ಅನುಭವ.<br>ಅಥವಾ<br>15 ವರ್ಷಗಳ ಆಡಳಿತಾತ್ಮಕ ಅನುಭವ, ಅದರಲ್ಲಿ ಉಪ ನೋಂದಣಾಧಿಕಾರಿಯಾಗಿGP 7600ರಲ್ಲಿ 8 ವರ್ಷಗಳ ಅನುಭವ ಅಥವಾ ಅದಕ್ಕೆ ಸಮಾನವಾದ ಹುದ್ದೆ.<br><br>**ನಿಯೋಜನೆಯ ಆಧಾರದ ಮೇಲೆ**<br>ಕೇಂದ್ರ/ರಾಜ್ಯ ಸರ್ಕಾರಗಳು ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ ಅಥವಾ ವಿಶ್ವವಿದ್ಯಾನಿಲಯಗಳು/ವಿಶ್ವವಿದ್ಯಾನಿಲಯ ಮಟ್ಟದ ಸಂಸ್ಥೆಗಳು ಅಥವಾ PSUಗಳ ಅಧಿಕಾರಿಗಳು<br>ಎ) ಸಮಾನ ದರ್ಜೆಯ ಹುದ್ದೆಯ ನಿರ್ವಹಣೆ<br>ಬಿ) ನೇರ ನೇಮಕಾತಿ ಅಡಿಯಲ್ಲಿ ಸೂಚಿಸಿರುವಂತೆ ಶೈಕ್ಷಣಿಕ ಅರ್ಹತೆ ಮತ್ತು ಅನುಭವ |
| 5 | **ಕೆಲಸದ ವಿವರಣೆ** | ಕುಲಸಚಿವರು, ನಿರ್ದೇಶಕರಿಗೆ ವರದಿ ಮಾಡಬೇಕು ಮತ್ತು ಅವರಿಗೆ ಆಡಳಿತಾತ್ಮಕ ಬೆಂಬಲವನ್ನು ಒದಗಿಸಬೇಕು. ಕುಲಸಚಿವರು ನ್ಯಾಯಾಲಯ, ಕೌನ್ಸಿಲ್, ಹಣಕಾಸು ಸಮಿತಿ, ಸೆನೆಟ್, ಟ್ರಸ್ಟಿಗಳ ಮಂಡಳಿ ಮತ್ತು ಅಧಿಕಾರಿಗಳು ನೇಮಿಸಿದ ಸಮಿತಿಗಳ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ ಮತ್ತು ನಿರ್ದೇಶಕರು ನಿಯೋಜಿಸುವ ಇತರ ಕರ್ತವ್ಯಗಳನ್ನು ನಿರ್ವಹಿಸಬೇಕು. |
| 6 | **ಕೊನೆಯ ದಿನಾಂಕದಂದು ಅರ್ಜಿ ಸಲ್ಲಿಸಲು ವಯಸ್ಸು** | 55 ವರ್ಷಗಳು (ನಿಯೋಜನೆಯ ಆಧಾರಕ್ಕಾಗಿ 58 ವರ್ಷಗಳು) |

ಉನ್ನತ ಶಿಕ್ಷಣ ಸಂಸ್ಥೆಗಳು ಎಂದರೆ ಭಾರತ ಸರ್ಕಾರವು ಅದರ ಪರವಾಗಿ ನೀಡಿರುವ ಸಂಸ್ಥೆಗಳ ಪಟ್ಟಿ. ಈ ಸಂಸ್ಥೆಗಳ ಪಟ್ಟಿಯು ಉನ್ನತ ಶಿಕ್ಷಣ ಇಲಾಖೆ, ಶಿಕ್ಷಣ ಸಚಿವಾಲಯದ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ. ಅಂತಹ ಸಂಸ್ಥೆಗಳ ವಿಶೇಷ ಪಟ್ಟಿಯು ಕೆಳಕಂಡಂತಿದೆ:

ಅ) ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ: https://www.education.gov.in/institutions-national-importance

ಆ) ಕೇಂದ್ರೀಯ ವಿಶ್ವವಿದ್ಯಾಲಯಗಳು: https://www.education.gov.in/central-universities-0

ಇ) ರಾಜ್ಯ ವಿಶ್ವವಿದ್ಯಾಲಯಗಳು: https://www.education.gov.in/state-universities

ಈ) MoE ಅನುದಾನಿತ ತಾಂತ್ರಿಕ ಸಂಸ್ಥೆಗಳು: https://www.education.gov.in/technical-education-1

**<u>ನಿಯಮಗಳು ಮತ್ತು ಷರತ್ತುಗಳು:</u>**

1. ಅಂಗವಿಕಲ ಅಭ್ಯರ್ಥಿಗಳು ಅಂದರೆ, ಕುರುಡು (ಬಿ) ಅಥವಾ ದೃಷ್ಟಿಹೀನತೆ (ಎಲ್‌ವಿ), ಕಿವುಡ (ಡಿ) ಅಥವಾ ಶ್ರವಣದೋಷ (ಎಚ್‌ಎಚ್), ಒಂದು ತೋಳು (ಒಎ) ಅಥವಾ ಎರಡೂ ತೋಳುಗಳು (ಬಿಎ), ಎರಡೂ ಕಾಲು (ಬಿಎಲ್) ಅಥವಾ ಒಂದು ಕಾಲು (ಒಎಲ್) ಅಥವಾ ಒಂದು ತೋಳು ಮತ್ತು ಒಂದು ಕಾಲು (ಒಎಎಲ್) ಅಥವಾ ಸೆರೆಬ್ರಲ್ ಪಾಲ್ಸಿ (ಸಿಪಿ) ಅಥವಾ ಗುಣವಾದ ಕುಷ್ಠರೋಗ (ಎಲ್‌ಸಿ) ಅಥವಾ ಕುಬ್ಜತೆ (ಡಿಡಬ್ಲ್ಯೂ) ಅಥವಾ ಆಸಿಡ್ ಅಟ್ಯಾಕ್ ವಿಕ್ಟಿಮ್ಸ್ (ಎಎವಿ), ಮಸ್ಕ್ಯುಲರ್ ಡಿಸ್ಟ್ರೋಫಿ (ಎಂಡಿವೈ) ಅಥವಾ ಎರಡೂ ಕಾಲು ಮತ್ತು ಒಂದು ತೋಳು (ಬಿಎಲ್‌ಒಎ), ನಿರ್ದಿಷ್ಟ ಕಲಿಕಾ ಅಂಗವೈಕಲ್ಯ (ಎಸ್‌ಎಲ್‌ಡಿ) ಅಥವಾ ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್- ಸೌಮ್ಯ, (ಎಎಸ್‌ಡಿ) (ಎಂ), ಮತ್ತು ಬಹು ಅಂಗವೈಕಲ್ಯ (ಎಂಡಿ) ಸೇರಿದಂತೆ ಮೇಲೆ ತಿಳಿಸಿದವರು ಸಹ ಅರ್ಜಿ ಸಲ್ಲಿಸಬಹುದು.
2. ವಿಕಲಾಂಗ ವ್ಯಕ್ತಿಗಳು ಮತ್ತು ಮಾಜಿ ಸೈನಿಕರಿಗೆ ವಯೋಮಿತಿಯಲ್ಲಿನ ಸಡಿಲಿಕೆಯು ಭಾರತ ಸರ್ಕಾರದ ನಿಯಮಗಳ ಪ್ರಕಾರ ಸಂಸ್ಥೆಗೆ ಅನ್ವಯವಾಗುವಂತೆ ಇರುತ್ತದೆ.
3. ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು.
4. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. ಯಾವುದೇ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಗಳನ್ನು ಮಾಡಲಾಗುವುದಿಲ್ಲ. ಭೌತಿಕ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
5. ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿದ ಎಲ್ಲಾ ವಿವರಗಳನ್ನು ಅಂತಿಮವೆಂದು ಪರಿಗಣಿಸಲಾಗುತ್ತದೆ ಮತ್ತು ಅದರ ನಂತರ ನೀಡುವ ಯಾವುದೇ ಬದಲಾವಣೆಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಇಡೀ ನೇಮಕಾತಿ ಪ್ರಕ್ರಿಯೆಗೆ ಅದನ್ನೇ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅಪ್‌ಲೋಡ್ ಮಾಡುವ ದಾಖಲೆಗಳು ಸ್ಪಷ್ಟವಾಗಿ ಗೋಚರಿಸುವಂತಿರಬೇಕು.
6. PSU /ಸ್ವಾಯತ್ತ ಸಂಸ್ಥೆಗಳಲ್ಲಿ ವಿವಿಧ ವೇತನ ಶ್ರೇಣಿಗಳನ್ನು ಹೊಂದಿದ್ದು ಅದರ ಅನುಭವ ಪ್ರಮಾಣಪತ್ರಗಳನ್ನು ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಅನುಭವದ ಪರಿಗಣನೆಗೆ ತಕ್ಕಂತೆ ಸಮಾನತೆಯ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದಿದ್ದರೆ, ಅನುಭವವನ್ನು ಪರಿಗಣಿಸಲಾಗುವುದಿಲ್ಲ.
7. ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ಸಿಜಿಪಿಎ/ ಜಿಪಿಎ ವ್ಯವಸ್ಥೆಯ ಅಡಿಯಲ್ಲಿ ಸ್ನಾತಕೋತ್ತರ ಪದವಿ ಮತ್ತು ಪದವಿಗಳನ್ನು ಪಡೆದ ಅಭ್ಯರ್ಥಿಗಳು ಸಿಜಿಪಿಎ/ ಜಿಪಿಎ ಅನ್ನು ಸೂಕ್ತ ಶೇಕಡಾವಾರುಗೆ ಪರಿವರ್ತಿಸಲು ವಿಶ್ವವಿದ್ಯಾಲಯ/ ಸಂಸ್ಥೆಯ ಮಾರ್ಗ ಸೂಚಿಗಳ ಪ್ರಕಾರ ಪಡೆದ ಅಂಕಗಳ ಸರಿಯಾದ ಶೇಕಡಾವಾರು ಪ್ರಮಾಣವನ್ನು ಸಲ್ಲಿಸಬೇಕಾಗುತ್ತದೆ. ದಾಖಲೆಗಳನ್ನು ಪರಿಶೀಲಿಸುವ ಸಮಯದಲ್ಲಿ (ವಿಶ್ವವಿದ್ಯಾಲಯ/ ಸಂಸ್ಥೆಯಿಂದ ನೀಡಲಾದ ಪತ್ರ) ಇದನ್ನು ಸಲ್ಲಿಸಬೇಕು.
8. ಅನುಭವ ಪ್ರಮಾಣಪತ್ರ(ಗಳು) ಅರ್ಜಿಯಲ್ಲಿ ನೀಡಲಾಗಿರುವ ಪ್ರಕಾರದಲ್ಲಿರಬೇಕು. ಉದ್ಯೋಗದಾತರ ಸಂಸ್ಥೆಯ ಲೆಟರ್ ಹೆಡ್‌ನಲ್ಲಿ ಅದನ್ನು ನೀಡಿರುವ ದಿನಾಂಕದೊಂದಿಗೆ ಇರಬೇಕು.
9. ನಿಗದಿತ ವಿದ್ಯಾರ್ಹತೆ ಕನಿಷ್ಟ ಅರ್ಹತೆಯಾಗಿದ್ದು, ಅಭ್ಯರ್ಥಿಯು ಅದನ್ನು ಹೊಂದಿದ್ದಾರೆ ಎಂಬ ಮಾತ್ರಕ್ಕೆ ಸಂದರ್ಶನಕ್ಕೆ ಅವರನ್ನು ಕರೆಯಲು ಅರ್ಹತೆ ಇದೆ ಎಂದೇನಲ್ಲ. ಅರ್ಹತೆ ಮತ್ತು/ಅಥವಾ ಅನುಭವದ ಆಧಾರದ ಮೇಲೆ ಸಂದರ್ಶನಕ್ಕೆ ಪ್ರವೇಶ ಪಡೆಯುವ ಅಭ್ಯರ್ಥಿಗಳ ಸಂಖ್ಯೆಯನ್ನು ನಿರ್ಬಂಧಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿದೆ.

10. ಮೇಲಿನ ಕೋಷ್ಟಕದಲ್ಲಿ ಸೂಚಿಸಲಾದ ಅರ್ಹತೆಯನ್ನು ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳು/ ಸಂಸ್ಥೆಗಳಿಂದ ಪಡೆದಿರಬೇಕು.

11. ಈ ಹುದ್ದೆಗೆ ಆಯ್ಕೆಯು ಸಂದರ್ಶನದ ಮೂಲಕ ಇರುತ್ತದೆ. ಆದಾಗ್ಯೂ, ಅಗತ್ಯವೆಂದು ಭಾವಿಸಿದರೆ ಲಿಖಿತ ಪರೀಕ್ಷೆಯನ್ನು ನಡೆಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

12. ಎಲ್ಲಾ ಅಭ್ಯರ್ಥಿಗಳು ಪ್ರಸಕ್ತ ಉದ್ಯೋಗದಾತರಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆದುಕೊಳ್ಳಬೇಕು ಮತ್ತು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಒಂದುವೇಳೆ ಪ್ರಮಾಣಪತ್ರಗಳ ಪರಿಶೀಲನೆಯ ಸಮಯದಲ್ಲಿ ಎನ್‌ಒಸಿ ಸಲ್ಲಿಸಲಾಗುವುದು ಎಂದು ಸಮರ್ಪಕವಾಗಿ ಸಹಿ ಮಾಡಿದ ಒಪ್ಪಂದದ ಪತ್ರವನ್ನು ಅಭ್ಯರ್ಥಿಯು ಅಪ್‌ಲೋಡ್ ಮಾಡಿದಲ್ಲಿ ಎನ್‌ಒಸಿ ಇಲ್ಲದ ಅರ್ಜಿಯನ್ನು ಸಹ ಪರಿಗಣಿಸಲಾಗುತ್ತದೆ.

13. ನಿಯೋಜನೆಯ ಆಧಾರದ ನಿಯಮಗಳು ದಿನಾಂಕ 17.06.2010 ರ ಮೆಮೊ ಸಂಖ್ಯೆ. 6/8/2009-ಇಎಸ್‌ಟಿಟಿ ಪ್ರಕಾರ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರವು ಹೊರಡಿಸುವ ಆದೇಶಕ್ಕೆ ತಕ್ಕಂತೆ ಇರುತ್ತದೆ.

14. ಕುಲಸಚಿವರಿಗೆ ವಸತಿ, ವಸತಿ ದೂರವಾಣಿ ಸಂಪರ್ಕ ಮತ್ತು ಮೊಬೈಲ್ ಅನ್ನು ಉಚಿತವಾಗಿ ಒದಗಿಸಲಾಗುವುದು. ಆದರೆ, ನೀರು ಮತ್ತು ವಿದ್ಯುತ್ ಶುಲ್ಕಗಳನ್ನು ಅವರೇ ಭರಿಸಬೇಕಾಗುತ್ತದೆ. ಅವರು ಕ್ಯಾಂಪಸ್‌ನಲ್ಲಿಯೇ ಕಡ್ಡಾಯವಾಗಿ ನೆಲೆಸಬೇಕು. ಅವನು/ಅವಳು **HRA** ಗೆ ಅರ್ಹರಾಗಿರುವುದಿಲ್ಲ ಮತ್ತು ಆದಾಯ ತೆರಿಗೆ ನಿಯಮಗಳ ಪ್ರಕಾರ ಹೆಚ್ಚುವರಿ ತೆರಿಗೆ ಪಾವತಿಸಲು ಬಾಧ್ಯರಾಗಿರುತ್ತಾರೆ.

15. ಅಭ್ಯರ್ಥಿಗಳು ಕೊನೆಯ ದಿನಾಂಕದವರೆಗೆ ಕಾಯದೆ, ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸಬೇಕು.

16. ಸೀಮಿತ ಪಟ್ಟಿಗೆ ಆಯ್ಕೆಯಾದ ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನಕ್ಕೆ ಹಾಜರಾಗಲು ಆಹ್ವಾನ ಪತ್ರಗಳನ್ನು ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ. ಅಭ್ಯರ್ಥಿಗಳು ತಮ್ಮ ನೋಂದಾಯಿತ ಇ-ಮೇಲ್‌ಗಳನ್ನು ಆಗಾಗ್ಗೆ ಪರಿಶೀಲಿಸುತ್ತಿರಬೇಕು. ಸೀಮಿತ ಪಟ್ಟಿಗೆ ಆಯ್ಕೆಯಾಗದ/ ಸಂದರ್ಶನಕ್ಕೆ ಅರ್ಹತೆ ಹೊಂದಿರದ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರಗಳನ್ನು ಮಾಡಲಾಗುವುದಿಲ್ಲ.

17. ಅಭ್ಯರ್ಥಿಯ ಅರ್ಹತೆ ಮತ್ತು ಲಿಖಿತ ಪರೀಕ್ಷೆ/ಸಂದರ್ಶನಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಸಂಸ್ಥೆಯ ನಿರ್ಧಾರವು ಅಂತಿಮವಾಗಿರುತ್ತದೆ ಮತ್ತು ಎಲ್ಲಾ ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರಬೇಕು.

18. ಯಾವುದೇ ಕಾರಣ ನೀಡದೆ ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಆಡಳಿತಾತ್ಮಕ ಕಾರಣದಿಂದ ಯಾವುದೇ ಹಂತದಲ್ಲಿ ಜಾಹಿರಾತು/ ನೇಮಕಾತಿಯನ್ನು ರದ್ದುಗೊಳಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಈ ನಿಟ್ಟಿನಲ್ಲಿ ಯಾವುದೇ ಪತ್ರ ವ್ಯವಹಾರವನ್ನು ನಡೆಸಲಾಗುವುದಿಲ್ಲ.

19. ಸಂದರ್ಶನವನ್ನು ಆನ್‌ಲೈನ್ ಮೂಲಕ ಅಥವಾ ಭೌತಿಕವಾಗಿ ನಡೆಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಸಂದರ್ಶನಕ್ಕೆ ಕರೆಯಲಾದ ಹೊರಗಿನ ಸ್ಥಳದ ಅರ್ಹ ಅಭ್ಯರ್ಥಿಗಳಿಗೆ, ಅವರ ಸ್ಥಳದಿಂದ ಬೆಂಗಳೂರಿಗೆ ಆಗಮಿಸುವ ಅತಿ ಕಡಿಮೆ ದೂರದ ಮಾರ್ಗದಲ್ಲಿನ ರೈಲು ಪ್ರಯಾಣದ ಎಸಿ ದ್ವಿತೀಯ ದರ್ಜೆ (2nd AC) ಟಿಕೇಟು ಶುಲ್ಕವನ್ನು ಪಾವತಿಸಲಾಗುತ್ತದೆ.

20. ಸೇವೆಯ ಅವಧಿಯಲ್ಲಿ ಪ್ರತಿಯೊಬ್ಬ ಉದ್ಯೋಗಿಯು ಯೋಜನೆ, ನಿಯಮಗಳು ಮತ್ತು ಬೈಲಾಗಳು (SRB), ಆಡಳಿತಾತ್ಮಕ ಕೈಪಿಡಿಗಳು, ಇತರ ಶಾಸನಬದ್ಧ ದಾಖಲೆಗಳು, CCS (ನಡವಳಿಕೆ) ನಿಯಮಗಳು ಮತ್ತು CCS (CCA) ನಿಯಮಗಳು ಇತ್ಯಾದಿಗಳನ್ನು ಗಮನಿಸಬೇಕು, ಬದ್ಧವಾಗಿರಬೇಕು ಮತ್ತು ಪಾಲಿಸಬೇಕು.

21. ಆಯ್ಕೆಯಾದ ಅಭ್ಯರ್ಥಿಯು ಭಾರತ ಸರ್ಕಾರವು ಸೂಚಿಸಿರುವ ಹೊಸ ಕೊಡುಗೆಯ ಪಿಂಚಣಿ, ಹಣಕಾಸು ಸಚಿವಾಲಯದ ದಿನಾಂಕ 22ನೇ ಡಿಸೆಂಬರ್ 2003 ಗೆಜೆಟ್ ಅಧಿಸೂಚನೆ F.No.5/7/2003-ECB & PR ಯೋಜನೆಗೆ ಒಳಪಟ್ಟಿರುತ್ತಾರೆ. ಆದಾಗ್ಯೂ, ಕೇಂದ್ರ ಸರ್ಕಾರದ ಸೇವೆಗೆ ಪ್ರವೇಶಿಸಿದ ಅಭ್ಯರ್ಥಿ ಅಥವಾ ಕೇಂದ್ರ ಸರ್ಕಾರ ಸ್ಥಾಪಿಸಿರುವ ಸ್ವಾಯತ್ತ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವವರು (29.08.1984 ದಿನಾಂಕದ ಪ್ಯಾರಾ-4ರಲ್ಲಿ ನಿಗದಿಪಡಿಸಿದ ಷರತ್ತುಗಳನ್ನು ಪೂರೈಸಿರುವುದು) 31.12.2003 ಅಥವಾ ಅದಕ್ಕೂ ಮೊದಲು ಮತ್ತು ಕೇಂದ್ರ ನಾಗರಿಕ ಸೇವಾ (ಪಿಂಚಣಿ) ನಿಯಮಗಳು, 1972 ರ ಮೂಲಕ ಆಡಳಿತ ನಡೆಸಲ್ಪಟ್ಟವರು CCS (ಪಿಂಚಣಿ)ಯ ನಿಬಂಧನೆಗಳ ಮೂಲಕ ಮುಂದುವರಿಯುತ್ತಾರೆ.) ನಿಯಮಗಳು, 1972, ಅಂತಹ ಅಭ್ಯರ್ಥಿಯು 01.01.2004 ರಂದು ಅಥವಾ ನಂತರ DP&&AR ನ O.M ನ ನಿಬಂಧನೆಗಳ ಅಡಿಯಲ್ಲಿ ದಿನಾಂಕ 29.08.1984. ಸಂ.28/10/84-PU ತಾಂತ್ರಿಕ ರಾಜೀನಾಮೆ ಸಲ್ಲಿಸಿದರೆ.

22. ಅಭ್ಯರ್ಥಿ ಸಲ್ಲಿಸಿದ ಪೂರ್ವ ಮಾಹಿತಿ ಅಥವಾ ದಾಖಲೆಗಳನ್ನು ಅವರ ಸೇವಾವಧಿಯ ಯಾವುದೇ ಸಮಯದಲ್ಲಿ ಪರಿಶೀಲಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಅಭ್ಯರ್ಥಿಯು ಸಲ್ಲಿಸಿರುವ ದಾಖಲೆಗಳು ಅಸಲಿ ಅಲ್ಲ ಎಂದು ಕಂಡುಬಂದಲ್ಲಿ, ನಂತರದ ಅವರ ಸೇವೆಯನ್ನು ಕೊನೆಗೊಳಿಸಲಾಗುತ್ತದೆ ಮತ್ತು ಶಿಸ್ತುಕ್ರಮ/ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗುತ್ತದೆ.

23. ಫಲಿತಾಂಶಗಳನ್ನು ಪ್ರಕಟಿಸುವ ಮೊದಲು ಅರ್ಜಿ ನಮೂನೆಯಲ್ಲಿ ಅರ್ಜಿದಾರರು ಭರ್ತಿ ಮಾಡಿದ ವಿವರಗಳನ್ನು ಸರಿಯಾಗಿ ಪರಿಶೀಲಿಸಲಾಗುತ್ತದೆ. ಅಭ್ಯರ್ಥಿಗಳು ಭರ್ತಿ ಮಾಡಿದ ವಿವರಗಳಿಗೆ ತಕ್ಕಂತೆ ಅಧಿಕೃತ ಪುರಾವೆಗಳನ್ನು ಒದಗಿಸಲು ವಿಫಲವಾದರೆ, ಅವರ ಉಮೇದುವಾರಿಕೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

24. ಪ್ರತಿ ಅರ್ಜಿಯೊಂದಿಗೆ ಅರ್ಜಿದಾರರು ಕುಲಸಚಿವ ಹುದ್ದೆಯ ಪಾತ್ರ ಮತ್ತು ಕಾರ್ಯಗಳ ಬಗ್ಗೆ ಹೊಂದಿರುವ ಮೆಚ್ಚುಗೆ ಮತ್ತು ಅವರು ಸಂಸ್ಥೆಗೆ ಹೇಗೆ ಕೊಡುಗೆ ನೀಡಬಹುದು ಹಾಗೂ ಅವರು ಆ ಹುದ್ದೆಗೆ ತಮ್ಮನ್ನು ತಾವು ಸೂಕ್ತವೆಂದು ಏಕೆ ಪರಿಗಣಿಸುತ್ತಾರೆ ಎಂಬುದರ ಬಗ್ಗೆ ಬರೆದು ಅದರೊಂದಿಗೆ ಲಗತ್ತಿಸಬೇಕು.

25. ಹುದ್ದೆಗಾಗಿ ಯಾವುದೇ ರೂಪದಲ್ಲಿ ಪ್ರಚಾರ ಮಾಡುವುದನ್ನು/ ರಾಜಕೀಯ ಅಥವಾ ಇನ್ಯಾವುದೇ ರೀತಿಯ ಪ್ರಭಾವ ಬೀರುವುದನ್ನು ಅನರ್ಹತೆ ಎಂದು ಪರಿಗಣಿಸಲಾಗುತ್ತದೆ.

26. ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ವಿವಾದವು ಬೆಂಗಳೂರಿನ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಗೌರವಾನ್ವಿತ ನ್ಯಾಯಾಲಯ/ಟ್ರಿಬ್ಯೂನಲ್‌ಗೆ ಒಳಪಟ್ಟಿರುತ್ತದೆ.

27. ಇಂಗ್ಲಿಷ್ ಮತ್ತು ಇತರ ಭಾಷೆಯ ಅಧಿಸೂಚನೆಯ ಆವೃತ್ತಿಗಳ ನಡುವಿನ ವ್ಯಾಖ್ಯಾನದ ಕಾರಣದಿಂದಾಗಿ ಯಾವುದೇ ಅಸ್ಪಷ್ಟತೆ/ವಿವಾದಗಳು ಉದ್ಭವಿಸಿದರೆ, ಇಂಗ್ಲಿಷ್ ಆವೃತ್ತಿಯಲ್ಲಿ ವಿವರಿಸಲಾದ ಸೂಚನೆಗಳು ಅಂತಿಮವಾಗಿರುತ್ತದೆ.

28. ಈ ಜಾಹೀರಾತಿಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಅನುಬಂಧ ಇದ್ದಲ್ಲಿ, ಅದನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
29. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 21.03.2026 ರಂದು ಬೆಳಿಗ್ಗೆ 11:59.
30. ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ನೇಮಕಾತಿ ಪೋರ್ಟಲ್ 20.02.2026 ರಿಂದ 21.03.2026 ರವರೆಗೆ ತೆರೆದಿರುತ್ತದೆ.

ಆಸಕ್ತ ಅಭ್ಯರ್ಥಿಗಳು ಸಂಸ್ಥೆಯ ಪೋರ್ಟಲ್: https://iisc.ac.in/careers/ ಗೆ ಭೇಟಿ ನೀಡಿ, ಶೈಕ್ಷಣಿಕ ಅರ್ಹತೆ, ವಯಸ್ಸು, ಸಮುದಾಯ, ಅಂಗವೈಕಲ್ಯ, ಅನುಭವ, NOC ಮತ್ತು ಇತರ ಪ್ರಮಾಣ ಪತ್ರಗಳನ್ನು 21.03.2026 ರೊಳಗೆ ಅಪ್‌ಲೋಡ್ ಮಾಡಲು ಕೋರಲಾಗಿದೆ.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಲಿಂಕ್: https://recruitment.iisc.ac.in/regular_position/

ಕುಲಸಚಿವರು